ಬಸವನಬಾಗೇವಾಡಿ ಕ್ಷೇತ್ರದಲ್ಲಿ ಸ.ಪ.ಪೂ ಕಾಲೇಜುಗಳನ್ನು ಮಂಜೂರು ಮಾಡುವುದು

4058 (4570) : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವನಬಾಗೇವಾಡಿ ಕ್ಷೇತ್ರದ ಮುಳವಾಡ ಮಮದಾಪುರ ಮಲಘಾರಾಗಳಿಗೆ ಸರಕಾರಿ ಪದವಿ ಪೂರ್ವ ವಿದ್ಯಾಲಯಗಳನ್ನು ಮಂಜೂರು ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದರೆ, ಸರ್ಕಾರ ಕೈಗೊಂಡಿರುವ ಕ್ರಮಗಳೇನು? ವಿವರ ನೀಡುವುದು.

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ನಾಗಮಂಗಲ ತಾಲ್ಲೂಕಿನಲ್ಲಿ ಶಾಲಾ ಶಿಕ್ಷಕರ ಕೊರತೆ ಹಾಗೂ ಶಾಲಾ ಕಟ್ಟಡಗಳು

4059 (4582) : ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಯಾವ ಯಾವ ಶಾಲೆಗಳಲ್ಲಿ ಯಾವ ಯಾವ ವಿಷಯದ ಶಿಕ್ಷಕರ ಕೊರತೆಯಿರುವುದು, ವಿವರ ನೀಡುವುದು; ಶಿಕ್ಷಕರುಗಳನ್ನು ತುಂಬಲು ಸರ್ಕಾರದ ಕ್ರಮವೇನು;

ಆ) ನಾಗಮಂಗಲ ಟೌನ್‌ನಲ್ಲಿರುವ ಟಿ.ಸಿ.ಹೆಚ್. ಕಟ್ಟಡದ ಕೆಲಸವನ್ನು ಯಾರಿಗೆ ನೀಡಲಾಗಿದೆ; ಕಟ್ಟಡದ ಕೆಲಸ ಪ್ರಗತಿಯ ಹಂತದಲ್ಲಿದೆಯೇ; ಹಾಗಿದ್ದಲ್ಲಿ ಯಾವಾಗ ಈ ಕಟ್ಟಡವನ್ನು ಪೂರ್ಣಗೊಳಿಸಲಾಗುವುದು;

ಇ) ನಾಗಮಂಗಲ ತಾಲ್ಲೂಕಿಗೆ ಇತ್ತೀಚೆಗೆ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗೆ ಕಟ್ಟಡ ಮಂಜೂರಾಗಿದ್ದು ಹೆಡ್ ಅಕೌಂಟಿನಲ್ಲಿ ಹಾಗೂ ಯಾರ ಶಿಫಾರಸ್ಸಿನ ಮೇಲೆ ಮಂಜೂರಾಗಿರುವುದು ವಿವರ ನೀಡುವುದು?

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು):

ಅ) ಬಂದಿದೆ.

ನಾಗಮಂಗಲ ತಾಲ್ಲೂಕಿನಲ್ಲಿ 263 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಖಾಲಿ ಇದ್ದು ಕೊರತೆ ಇರುವ ಶಾಲೆಗಳಿಗೆ ತಾತ್ಕಾಲಿಕವಾಗಿ ಶಿಕ್ಷಕರನ್ನು ನಿಯೋಜನೆ ಮಾಡಿ ಶಾಲೆಗಳು ನಡೆಯುವಂತೆ ಕ್ರಮ ಕೈಗೊಳ್ಳಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ 505 ಹುದ್ದೆ ಖಾಲಿ ಇದ್ದು ಸರ್ವೋಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಈ ಜಿಲ್ಲೆಯಲ್ಲಿ 2003–04 ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಮಾಡುತ್ತಿಲ್ಲ. ಶಾಲೆಯಲ್ಲಿ ಖಾಲಿ ಇರುವ ಹುದ್ದೆಗಳ ಜಾಗದಲ್ಲಿ ಬದಲಿ ವ್ಯವಸ್ಥೆ ಮೇಲೆ ನಿವೃತ್ತ ಶಿಕ್ಷಕರನ್ನು ದಿನಕ್ಕೆ ರೂ. 100/– ರಂತೆ ಸಂಭಾವನೆ ನೀಡಿ ಕೆಲಸ ಮಾಡಿಸಲಾಗುತ್ತಿದೆ.

ನಾಗಮಂಗಲ ತಾಲ್ಲೂಕಿನಲ್ಲಿ ಪ್ರೌಢಶಾಲಾ ಶಿಕ್ಷಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸದ್ಯದಲ್ಲಿಯೇ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಸಿ.ಇ.ಟಿ ಮುಖಾಂತರ ಭರ್ತಿ ಮಾಡಲಾಗುವುದು. ಶಾಲಾವಾರು ಖಾಲಿ ಹುದ್ದೆಗಳ ಮಾಹಿತಿಯನ್ನು ಅನುಬಂಧ 1ರಲ್ಲಿ ಲಗತ್ತಿಸಿದೆ.

ಆ) ಟಿ.ಸಿ.ಹೆಚ್. ಕಟ್ಟಡದ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮ, ಮಂಡ್ಯರವರಿಗೆ ವಹಿಸಲಾಗಿದೆ. ತಳಪಾಯ ಕೆಲಸ ಪ್ರಗತಿಯಲ್ಲಿದೆ. ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಕಟ್ಟಡದ ಕಾಮಗಾರಿ 2003ರ ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಇ) ನಾಗಮಂಗಲ ತಾಲ್ಲೂಕಿಗೆ ಇತ್ತೀಚೆಗೆ ಪ್ರೌಢಶಾಲಾ ಹಾಗೂ ಪ್ರಾಥಮಿಕ ಶಾಲೆಗೆ ಕಟ್ಟಡ ಮಂಜೂರಾಗಿರುವ ಸರ್ಕಾರಿ ಆದೇಶ ಹಾಗೂ ಲೆಕ್ಕ ಶೀರ್ಷಿಕೆ ವಿವರ ಈ ಕೆಳಕಂಡಂತಿದೆ.

1. 2002–03ನೇ ಸಾಲಿನಲ್ಲಿ ಜಿಲ್ಲಾ ವಲಯ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 4202–01–202–1–01ರಲ್ಲಿ ಸರ್ಕಾರಿ ಪ್ರೌಢಾಲೆ, ಕರಡಹಳ್ಳಿ ಇಲ್ಲಿಗೆ ಕಟ್ಟಡ ಮಂಜೂರಾಗಿದೆ. ರೂ.2.00 ಲಕ್ಷ ಅನುದಾನ ಬಿಡುಗಡೆಯಾಗಿ ಕರ್ನಾಟಕ ಭೂಸೇನಾ ನಿಗಮ, ಮಂಡ್ಯರವರಿಗೆ ಕಾಮಗಾರಿ ವಹಿಸಲಾಗಿದೆ.
2. 2002–03ನೇ ಸಾಲಿಗೆ ರಾಜ್ಯ ವಲಯ ಕಾರ್ಯಕ್ರಮ ಯೋಜನೆ ಲೆಕ್ಕ ಶೀರ್ಷಿಕೆ 2202–01–80–01–17 ಸರ್ಕಾರಿ ಆದೇಶ ಸಂಖ್ಯೆ : ಇಡಿ 50 ಯೋ 2000 ಭಾಗ–2 ದಿ:18.2.2003ರಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತೊಳಲಿ, ಬದ್ರಿ ಕೊಪ್ಪಲು, ಕಾಡೇನಹಳ್ಳಿ, ಹಡೇನಹಳ್ಳಿ, ಹೂವಿನಹಳ್ಳಿ, ಮಾಚರಾಯಕನಹಳ್ಳಿ, ಹುರಳಿಗಂಗನಹಳ್ಳಿ, ಕೂಚಹಳ್ಳಿ
3. ಸರ್ಕಾರಿ ಆದೇಶ ಸಂಖ್ಯೆ: ಇಡಿ 118 ಯೋಸಕಾ 2000 (ಭಾಗ 2) ಬೆಂಗಳೂರು ದಿ:20.12.2002ರಲ್ಲಿ ಸ.ಹಿ.ಪ್ರಾ.ಶಾಲೆ, ಲಾಳನಕೆರೆ, ಹೊನ್ನಾವರ ಎತ್ತಗೋನಹಳ್ಳಿ
4. ಪಿಎಂಜಿವೈ ಯೋಜನೆಯಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆಂಚಗೋನಹಳ್ಳಿ ಶಾಲೆಗೆ ಕೊಠಡಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ವರದಿಯಂತೆ ಆಯ್ಕೆ ಮಾಡಿದೆ.
5. ಆರ್.ಐ.ಡಿ.ಎಫ್. ಯೋಜನೆಯಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ನರಗನಹಳ್ಳಿಗೆ ಕೊಠಡಿಗಳನ್ನು ವಿದ್ಯಾರ್ಥಿಗಳು ಶಿಕ್ಷಕರುಗಳಿಗನುಗುಣವಾಗಿ ನಿರ್ಮಿಸಲಾಗುತ್ತಿದೆ.
6. ಸರ್ಕಾರಿ ಆದೇಶ ಸಂಖ್ಯೆ: ಇಡಿ 142 ಯೋಸಕ 2002, ಬೆಂಗಳೂರು ದಿ: 7.2.2003ರ ಲೆಕ್ಕ ಶೀರ್ಷಿಕೆ 2202–02–109–0–09 (ಯೋಜನೆ) ರಡಿ ಸರ್ಕಾರಿ ಪ್ರೌಢಶಾಲೆ, ಬಿಂಡಿಗನವಿಲೆ, ಕದಬಹಳ್ಳಿ
7. ಸರ್ಕಾರಿ ಆದೇಶ ಸಂಖ್ಯೆ: ಇಡಿ 159 ಯೋಸಕ 2(ಭಾಗ) ಬೆಂಗಳೂರು ದಿ:7.3.2003 ಲೆಕ್ಕ ಶೀರ್ಷಿಕೆ 2202–02–109–0–08 ಮೈಲಾರಪಟ್ಟಣ, ಹರದನಹಳ್ಳಿ
8. ಸರ್ಕಾರಿ ಆದೇಶ ಸಂಖ್ಯೆ: ಇಡಿ 159 ಯೋಸಕ 02 ಬೆಂಗಳೂರು ದಿ: 2.7.2002ರ ಸೇರ್ಪಡೆ ಮತ್ತು ಮಾರ್ಪಾಡು ಕಾರ್ಯಕ್ರಮದಡಿ ಜಿಲ್ಲಾ ಪಂಚಾಯಿತಿ ಅನುಮೋದನೆಯಂತೆ ಸರ್ಕಾರಿ ಪ್ರೌಢಾಲೆ, ಬಿಂಡಿಗನವಿಲೆ, ಕದಬಹಳ್ಳಿಗೆ ತಲಾ 1 ಕೊಠಡಿ.

ಅನುಬಂಧ–1

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ವಿಷಯವಾರು ವಿವರ

ಕ್ರ.ಸಂ	ಶಾಲೆಯ ಹೆಸರು	ಖಾಲಿ ಹುದ್ದೆಗಳ ವಿಷಯವಾರು ವಿವರ								ಒಟ್ಟು
		PCM	CBZ	ARTS	KAN	PE-1	HORTI	DRAWING	PE-2	
1	2	3	4	5	6	7	8	9	10	11
1	ಸ.ಪ್ರೌ.ಶಾ ಅಳೀಸಂದ್ರ	1	1	–	–	1	–	–	–	03
2	ಹರದನಹಳ್ಳಿ	1	–	–	–	1	1	–	–	03
3	ಮೈಲಾರ ಪಟ್ಟಣ	1	1	–	–	–	1	1	–	04
4	ತಟ್ಟಹಳ್ಳಿ	1	–	–	1	–	–	–	–	02
5	ಸ.ಪ.ಪೂ.ಕಾ ಬಿಂಡಿಗನವಿಲೆ	1	–	2	–	–	–	–	1	04
6	ಸ.ಪ.ಪೂ.ಕಾ ನಾಗಮಂಗಲ	2	1	–	–	–	–	–	–	03
7	ಸ.ಪ.ಪೂ.ಕಾ ಕಾಂತಾಪುರ	–	1	1	1	–	1	–	–	04
8	ಸ.ಪ.ಪೂ.ಕಾ ಕದಬಳ್ಳಿ	–	1	2	–	–	–	–	–	03
9	ಸ.ಪ.ಪೂ.ಕಾ ಹೆರಗನಹಳ್ಳಿ	–	–	1	–	1	1	–	–	03
10	ಸ.ಪ್ರೌ.ಶಾ ಬೋಗಾದಿ	–	–	–	–	1	–	–	–	01
11	ಸ.ಪ್ರೌ.ಶಾ ಹೊನ್ನಾವರ	–	–	–	–	1	–	–	–	01
12	ಸ.ಪ್ರೌ.ಶಾ ಬೆಳ್ಳೂರು	–	–	–	–	–	1	–	–	01
	ಒಟ್ಟು	07	05	05	02	05	05	01	01	32